ಜೀವಕೊಟ್ಟಳು. ಕಿಟಕಿಯ ಮೂಲಕ ಅನಾಥ ಮಕ್ಕಳು ಚೆಂಡೆಬಡಿಯುವ ಕೋತಿಯನ್ನು, ನೃತ್ಯವಾಡುವ ಬೊಂಬೆಯನ್ನು, ಓಡುವ ರೈಲುಬಂಡಿಯನ್ನು ದಿಟ್ಟಿಸಿ ನೋಡಿದರು. ಆದರೆ, ಮಗು ಮಾತ್ರ ತಲೆತಿರುಗಿಸಿ ಅತ್ತ ನೋಡಲೇ ಇಲ್ಲ. ಮದರ್ ತನ್ನ ತಂದೆಯನ್ನು ನೋಡುವಂತೆ ಅವನನ್ನು ಬಲವಂತಪಡಿಸಲಿಲ್ಲ.

'ಇದೆಂತಹ ವಿಚಿತ್ರವಾದ ನಡವಳಿಕೆ?' ಮೇನೋನ್ ಮುಜುಗರಪಟ್ಟು ಕೇಳಿದ.

'ಅವನನ್ನು ಸ್ವಲ್ಪ ಕಾಲ ಮನೆಯಲ್ಲಿರಿಸಿದರೆ, ಅವನು ನಿಮ್ಮನ್ನು ಪ್ರೀತಿಸತೊಡಗುತ್ತಾನೆ, ಮಿಸೆಸ್ ಮೇನೋನ್' ಮದರ್ ಹೇಳಿದರು.

'ಎರಡು ವರ್ಷ ಕಳೆದರೆ ಲೀಲಾ ಕೆಲಸದಿಂದ ನಿವೃತ್ತಿ ಪಡೆಯುತ್ತಾಳೆ. ಅದರ ನಂತರ ಅವನನ್ನು ಮನೆಯಲ್ಲಿರಿಸಿಕೊಳ್ಳಬಹುದು" ಮೇನೋನ್ ಹೇಳಿದ.

'ಮೋಹನ್ ಒಳ್ಳೆಯ ಹುಡುಗ. ಆದರೆ, ಅವನಿಗೆ ಉಳಿದ ಮಕ್ಕಳಂತೆ ರಜಾದಿನಗಳಲ್ಲಿ ಮನೆಗೆ ಹೋಗಲು ಸಾಧ್ಯವಾಗಲಿಲ್ಲ. ನೀವು ಒಂದು ಪತ್ರ ಕೂಡ ಕಳಿಸಲಿಲ್ಲ. ಅವನಿಗೆ ಬೇಜಾರಾಗೊದರಲ್ಲಿ ಏನು ಅಚ್ಚರಿಯಿದೆ, ಮಿಸ್ಟರ್ ಮೇನೋನ್?" ಮದರ್ ಪ್ರಶ್ನಿಸಿದರು.

'ಏನೋನೋ ಕೆಲಸಗಳು, ಮದರ್. ಅದರಲ್ಲೇ ಟೈಮ್ ಹೋಗಿಬಿಡುತ್ತಿತ್ತು. ಜೊತೆಗೆ ತಂಗಂನ ಕಳೆದುಕೊಂಡಿದ್ದರ ದುಃಖ. ನನ್ನ ಮನಸ್ಸೇ ಸರಿಯಿರಲಿಲ್ಲ' ಮೇನೋನ್ ಪಿಸುಗುಟ್ಟಿದ.

'ಅಮ್ಮ ತೀರಿಕೊಂಡಿದ್ದರಿಂದ ಅವನ ಮನಸ್ಸು ಸರಿಯಿರಲಿಲ್ಲ' ಮದರ್ ಹೇಳಿದರು.

'ಮದರ್, ದಯವಿಟ್ಟು ನನ್ನನ್ನು ಕ್ಷಮಿಸಿ' ಮೇನೋನ್ ಹೇಳಿದ.

'ಕ್ಷಮಿಸಬೇಕಾದ್ದು ನಾನಲ್ಲ. ಮಿಸ್ಟರ್ ಮೇನೋನ್, ಒಳ್ಳೆಯ ಗಂಡನಾದವನಿಗೆ ಮಾತ್ರ ಒಳ್ಳೆಯ ತಂದೆಯಾಗಲು ಸಾಧ್ಯ' ಮದರ್ ಹೇಳಿದರು.

'ಮದರ್, ಇವರು ಒಬ್ಬ ಪ್ರಾಂಜಲ ಮನಸ್ಸಿನವರು, ಖಂಡಿತವಾಗಿಯೂ ಒಬ್ಬ ಒಳ್ಳೆಯ ಗಂಡನಾಗಲು ಬೇಕಾದ ಹೃದಯ ವೈಶಾಲ್ಯತೆ ಇವರಿಗಿದೆ.' ಲೀಲಾ ಹೇಳಿದಳು. ಅವಳು ಆಟಿಕೆಗಳನ್ನೆಲ್ಲ ನೆಲದ ಮೇಲೆಯೇ ಬಿಟ್ಟು ಯಾವ ಎಗ್ಗೂ ಇಲ್ಲದೆ, ಮದರಿನ ಕಣ್ಣುಗಳನ್ನೇ ದುರುಗುಟ್ಟಿ ನೋಡಿದಳು.

'ನಾವೀಗಲೇ ಊಟಿಗೆ ಹೋಗಬೇಕು. ಬೇಕಾದರೆ, ಹಿಂತಿರುಗಿ ಬರುವಾಗ ಪುನಃ ಮೋಹನನ್ನು ಭೇಟಿಯಾಗುತ್ತೇವೆ' ಮೇನೋನ್ ಉದಾಸೀನದಿಂದ ಹೇಳಿದ. ಆತ ತನ್ನ ಹೆಂಡತಿಯ ಮೇಲೆ ಸಂಕೋಚದಿಂದ ಒಂದು ಕೈಯನ್ನಿಟ್ಟ.

'ಓಕೆ ಮೋಹನ್ ನಾವು ಹೋಗ್ತಾ ಇದ್ದೀವಿ. ಈ ನಿನ್ನ ತಂದೆ ಹಾಗೂ ಹೊಸ ಅಮ್ಮ...' ಮೇನೋನ್ ಬಾಗಿಲಿನತ್ತ ಹೆಜ್ಜೆ ಇಡುತ್ತಿದ್ದಂತೆ, ತಿರುಗಿ ನೋಡುತ್ತಾ ಹೇಳಿದ.

'ಬೇಸಿಗೆಯ ರಜೆಗೆ ಅದೇನೇ ಆಗಲಿ ಬಂದೇ ಬರ್ತೀವಿ' ಮಿಸೆಸ್ ಮೇನೋನ್ ಹೇಳಿದಳು. ಅವಳು ಮದರ್ ಸುಪಿರೀಯರ್, ಸಿಸ್ಟರ್ ಯುಫ್ರೇಸ್ಯಾ ಮಾತ್ರವಲ್ಲ ಹೊರಗೆ ನಿಂತಿದ್ದ ಅನಾಥರನ್ನೆಲ್ಲ ನೋಡಿ ಮುಗುಳ್ನಕ್ಕಳು.

ಅವರ ಕಾರಿನ ಸದ್ದಡಗಿದಾಗ ಮದರ್ ಸುಪೀರಿಯರ್ ಮಗುವನ್ನು ತಮ್ಮ ಎದೆಯ ಮೇಲಿನಿಂದ ನಿಧಾನಕ್ಕೆ ಬೇರ್ಪಡಿಸಿ ಸಿಸ್ಟರ್ ಯುಫ್ರೇಸ್ಯಾರತ್ತ ನೀಡಿದರು.

'ನಿದ್ರಿಸುತ್ತಿದ್ದಾನೆ, ಒಳಗೆ ಕರೆದುಕೊಂಡು ಹೋಗಿ ಮಲಗಿಸು. ಇಂದು ಸಾಯಂಕಾಲ ಡಾಕ್ಟರ್ ಬಂದು ಮತ್ತೊಮ್ಮೆ ಪರೀಕ್ಷಿಸಲಿ' ಮದರ್ ಹೇಳಿದರು.

'ಕರ್ತನಿಗೆ ಸ್ತುತಿಯಿರಲಿ' ಸಿಸ್ಟರ್ ಯುಫ್ರೇಸ್ಯಾ ಪಿಸುಗುಟ್ಟಿದರು. ಕ್ರೈಸ್ತ ಸನ್ಯಾಸಿನಿಗಳು, ನಿದ್ರಿಸುವ ಮಗುವು ಕೋಣೆ ಬಿಟ್ಟ ನಂತರ ಅನಾಥ ಬಾಲಕಿಯರು ಕಿಟಕಿಯಿಂದ ಒಳಕ್ಕೆ ನೋಡುತ್ತಾ ತುಂಬಾ ಹೊತ್ತು ನಿಶ್ಚಲರಾಗಿ ಕುಳಿತಿದ್ದರು. ಕೋತಿಯನ್ನು, ಸೇತುವೆಯನ್ನು, ರೈಲುಬಂಡಿಯನ್ನು, ಬೊಂಬೆಗಳನ್ನು, ವರ್ಣರಂಜಿತವಾದ ಹೊಸಬಟ್ಟೆಗಳನ್ನು ಅವರು ಕುತೂಹಲದಿಂದ ನೋಡಿದರು. ನೊಣ ಮುತ್ತಿದ ಕೇಕಿನ ತುಣುಕುಗಳನ್ನು, ಕಪ್ಪಿನಲ್ಲಿರುವ ತಣ್ಣನೆಯ ಚಹವನ್ನು ನೋಡುತ್ತಾ ಅತ್ಯಂತ ಕಿರಿಯ ವಯಸ್ಸಿನ ಅನಾಥ ಮಗು ಹೇಳಿತು, 'ಅವರೇಕೆ ಕೇಕು ತಿಂದಿಲ್ಲ? ನಿನ್ನೆ ಸಾಯಂಕಾಲ ಅಡಿಗೆಯವಳಾದ ಎಲ್ಸಿಯಕ್ಕ ತಯಾರಿಸಿದ ಕೇಕು ಅದು. ಅದರ ತುಂಬಾ ಸಕ್ಕರೆ'

ಉಳಿದ ಹೆಣ್ಮಕ್ಕಳು ಯಾವುದೇ ಅಭಿಪ್ರಾಯವನ್ನು ಹೇಳಲಿಲ್ಲ. ಅಡಿಗೆ ಮನೆಯ ಸಮೀಪದಲ್ಲಿ ಬೆಳೆದು ನಿಂತಿದ್ದ ಜೀಗುಜ್ಜೆಯ ಮರದ ಕೆಳಗಿನಿಂದ ಹಸಿದು ಬೆಂಡಾದ ತುರ್ಕಿಕೋಳಿಗಳು ಗಟ್ಟಿಯಾಗಿ ಅಳುತ್ತಿದ್ದವು. ●